# ಒಣಹುಲ್ಲು

■ ಚಿಂತಾಮಣಿ ಕೊಡ್ಲೆಕೆರೆ
ಕಲೆ: ಎಸ್‌.ವಿ. ಹೂಗಾರ್

ಮಾಗಡಿ ಕುಣಿಗಲ್ ರಸ್ತೆಯಲ್ಲಿ ಮಾಗಡಿಯಿಂದ ಹನ್ನೆರಡು ಕಿ.ಮೀ. ದೂರದಲ್ಲಿ ಮುದುಗೆರೆ ಎಂಬುದೊಂದು ಸಣ್ಣ ಹಳ್ಳಿ. ಇಲ್ಲಿ ರಂಗನಾಥಸ್ವಾಮಿಯದೊಂದು ದೇವಾಲಯವಿದೆ. ಇದೊಂದು ನೋಡಲೇಬೇಕಾದ ಅಪರೂಪದ ದೇವಾಲಯವೆಂದು ಚಕ್ರಪಾಣಿಯವರು ವರ್ಣಿಸಿದ್ದರು. ಮಾಗಡಿಗೆ ಹೋದ ನಾನು ಈ ಸಲ ಮುದುಗೆರೆಗೆ ಹೋಗಿಬರುವುದೆಂದು ಲೆಕ್ಕ ಹಾಕಿದ್ದೆ. ಮಾಗಡಿಗೆ ಹೋದ ಕೆಲಸ ಮುಗಿದ ಮೇಲೆ ಅಲ್ಲೇ ಇದ್ದ ಆಟೋದವರೊಬ್ಬರ ಜೊತೆ ಮಾತಾಡಿ ಅದೇ ಆಟೋದಲ್ಲಿ ಸಾಯಂಕಾಲ ವಾಪಸು ಬರುವುದನ್ನೂ ಏರ್ಪಡಿಸಿಕೊಂಡೆ. ಇನ್ನೇನು ಹೊರಡಬೇಕು ಎನ್ನುವ ಹೊತ್ತಿಗೆ 'ಶಿವಾ' ಎಂದು ಹಿಂದಿನಿಂದ ಒಬ್ಬರು ನನ್ನ ಬೆನ್ನು ತಟ್ಟಿದರು. 'ಯಾರು?' ಎನ್ನುತ್ತ ಹಿಂದಿರುಗಿ ನೋಡಿದೆ. ಒಬ್ಬರು ಸ್ವಾಮೀಜಿ ನಿಂತಿದ್ದಾರೆ. ಗಮನವಿಟ್ಟು ನೋಡಿದೆ. ಪರಿಚಿತರಲ್ಲ. ಕಾವಿಧಾರಿ, ದಪ್ಪನೆ ವ್ಯಕ್ತಿ. ಹಣೆಗೆ ಭಸ್ಮ ಬಡಿದು ಕೈಯಲ್ಲೊಂದು ದಂಡ ಹಿಡಿದು ಕೊರಳ ತುಂಬಾ ರುದ್ರಾಕ್ಷಿ ಧರಿಸಿದ್ದ ಈ ಸ್ವಾಮಿ ನನ್ನನ್ನು ಯಾರೆಂದು ತಿಳಿದುಕೊಂಡರೋ!

'ಮುದುಗೆರೆಗೆ ಹೋಗುತ್ತಿದ್ದೀರಾ?'

'ಹೌದು ಸ್ವಾಮಿ.'

'ನಾನೂ ಬರಬಹುದೆ?'

ನಾನು ಏನು ಹೇಳಬಹುದೋ, ತಿಳಿಯಲಿಲ್ಲ. ಅನುಮಾನಿಸುತ್ತ ಹೇಳಿದೆ: 'ತಾವ್ಯಾರೋ, ನನಗೆ ಗೊತ್ತಿಲ್ಲವಲ್ಲ.'

ಸ್ವಾಮಿಗಳ ಮುಖ ಸಣ್ಣಗಾಯಿತು. ಬೆಳ್ಳಗಿನ ಗಡ್ಡ ಅಸ್ತವ್ಯಸ್ತವಾಗಿ ಹಾರಾಡುತ್ತಿತ್ತು. ದಂಡ ಊರಿಕೊಂಡು ನಿಂತವರು ಕೊಂಚ ಬಾಗಿದರು: 'ನೋಡಿದರೇ ತಿಳಿಯುತ್ತದೆ, ನಾನೊಬ್ಬ ಸನ್ಯಾಸಿ. ಮುದುಗೆರೆಗೆ ನಾನೂ ಹೋಗಬೇಕಿತ್ತು.'

ಮತ್ತೊಮ್ಮೆ ಅವರನ್ನು ನಿಟ್ಟಿಸಿ ನೋಡಿದೆ. ಇವರನ್ನು ಕರೆದುಕೊಂಡು ಹೋಗುವುದರಲ್ಲಿ ಸಮಸ್ಯೆ ಏನೂ ಇಲ್ಲ ಅನ್ನಿಸಿತು. 'ನಾನು ಕೆಲ ಗಂಟೆಗಳ ಕಾಲ ಅಲ್ಲಿದ್ದು ವಾಪಸು ಮಾಗಡಿಗೆ ಬೇಗ ಬರುವವನು. ರಾತ್ರಿ ಬೆಂಗಳೂರಿಗೆ ವಾಪಸು ಹೋಗಬೇಕು' ಎಂದೆ.

ಅದಕ್ಕೂ ಅವರು ಒಪ್ಪಿಗೆ ಎಂಬಂತೆ ತಲೆ ಆಡಿಸಿದರು. 'ನನಗೂ ಮುದುಗೆರೆಯಲ್ಲಿ ಒಂದೆರಡು ಗಂಟೆಗಳ ಕೆಲಸ ಅಷ್ಟೆ. ನೀವು ಬರುವಾಗ ನನ್ನನ್ನು ವಾಪಸು ಮಾಗಡಿಗೆ ಕರೆದುಕೊಂಡು ಬಂದುಬಿಟ್ಟರೆ ದೊಡ್ಡ ಉಪಕಾರವಾಗುತ್ತದೆ' ಎಂದರು. ನಿರುಪಾಯನಾಗಿ ಒಪ್ಪಿಕೊಂಡೆ.

ಆಟೋ ಚಾಲಕ ಒಳ್ಳೆ ಮಾತುಗಾರ. ಹೆಸರು ಭದ್ರಯ್ಯ. ಬೆಂಗಳೂರಿಂದ ಬಂದವನೊಬ್ಬ ಮುದುಗೆರೆಗೆ ಹೋಗುತ್ತಿರುವುದರಿಂದ ಅದೊಂದು ವಿಶಿಷ್ಟ ಸ್ಥಳವಿರಬೇಕೆಂದು ಅವನಾಗಲೇ ಊಹಿಸಿಕೊಂಡಿದ್ದ. ವಾಸ್ತವಿಕವಾಗಿ ಅವನಿಗೂ ಆ ಊರು ಹೊಸದೇ! ಅಲ್ಲೊಂದು ರಂಗನಾಥಸ್ವಾಮಿ ದೇವಾಲಯವಿದೆ ಎಂದು

